★★★

ಇಡೀ ಅಂತಸ್ತಿನಲ್ಲಿ ಹರಡಿಕೊಂಡಿರುವ ಹವಾನಿಯಂತ್ರಿತ ಸಭಾಂಗಣವದು. ಅಲ್ಲೊಂದು ಇಲ್ಲೊಂದು ಹೀಗೆ ಗೋಲಾಕಾರದಲ್ಲಿ ನೀಟಾಗಿ ಜೋಡಿಸಿದ ಟೇಬಲ್ಲು, ಕುರ್ಚಿಗಳು. ಅದರ ಮೇಲೆ ಹಾಸಿದ ಬಿಳಿಯ ಮಕಮಲ್ಲಿನ ವಸ್ತ್ರ. ಒಂದು ಟೇಬಲ್ಲಿನಲ್ಲಿ ಆ ಗಂಡಹೆಂಡತಿಯೂ ಇನ್ನೊಂದು ಟೇಬಲ್ಲಿಗೆ ಈ ಗಂಡಹೆಂಡತಿಯೂ ಕುಳಿತರು. ಇನ್ನೂ ಹತ್ತು ಹನ್ನೆರಡು ಟೇಬಲ್ಲುಗಳು ಖಾಲಿ ಬಿದ್ದಿದ್ದವು. ಹದಿನೈದು ನಿಮಿಷ ಆ ಸಭಾಂಗಣದ ಶ್ರೀಮಂತಿಕೆಯನ್ನು ಸವಿಯುತ್ತ ಕೂತಿರುತ್ತಿದ್ದಂತೆಯೇ ಇನ್ನೂ ನಾಲ್ಕು ಜೋಡಿಗಳು ಅದೇ ಗತ್ತಿನಲ್ಲಿ ಬಂದು ಕೂತವು. ಒಟ್ಟೂ ಆರು ದಂಪತಿಗಳಲ್ಲಿ ತನ್ನ ಪರಿಚಯದವರ್‍ಯಾರಾದರೂ ಇದ್ದಾರೋ ಅಂತ ವಿಶ್ವನಾಥನೂ ಮಂಜುಳೆಯೂ ಅವರೆಲ್ಲರ ಬದಿ ಒಮ್ಮೆ ಕಣ್ಣಾಡಿಸಿದರು. ಆ ಜೋಡಿಗಳೂ ಹಾಗೆಯೇ ಬೇರೆ ದಂಪತಿಗಳನ್ನೇ ದಿಟ್ಟಿಸುತ್ತಿದ್ದರು.

'ಲೇಡೀಸ್ ಆಂಡ್ ಜಂಟಲ್ ಮನ್' ಅಂತ ಆರಂಭಿಸಿದ ಒಬ್ಬ ವ್ಯಕ್ತಿ ಎಲ್ಲರನ್ನುದ್ದೇಶಿಸಿ

